498(206) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಎಷ್ಟು ಪಾಲಿಟೆಕ್ನಿಕ್‌ಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ ಕಾರ್ಯನಿರ್ವಹಿಸುತ್ತಿದೆ ಅವುಗಳಲ್ಲಿ ಎಷ್ಟು ಜನ ಸಹಾಯಕ ಉಪನ್ಯಾಸಕರು ಇದ್ದಾರೆ,

ಆ) 1986ರಲ್ಲಿ ಇಂಜಿನಿಯರಿಂಗ್ ವಿಭಾಗಗಳ ಸಹಾಯಕ ಉಪನ್ಯಾಸಕರುಗಳನ್ನು ಉಪನ್ಯಾಸಕರ ಹುದ್ದೆಗೆ ಉನ್ನತೀಕರಿಸಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಸಹಾಯಕ ಉಪನ್ಯಾಸಕರುಗಳನ್ನು ಉನ್ನತೀಕರಣದಿಂದ ಕೈಬಿಟ್ಟಿರುವುದು ನಿಜವೇ

ಇ) ಹಾಗಿದ್ದಲ್ಲಿ, ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದವರನ್ನು ಕೈಬಿಡಲು ಕಾರಣಗಳೇನು,

ಈ) ಪಾಲಿಟೆಕ್ನಿಕ್‌ಗಳಲ್ಲಿರುವ ಎಲ್ಲಾ ವಿಭಾಗಗಳಿಗೂ ಏಕರೂಪದ ಉನ್ನತೀಕರಣದ ಸೌಲಭ್ಯಗಳನ್ನು ಒದಗಿಸಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಸಹಾಯಕ ಉಪನ್ಯಾಸಕರುಗಳಿಗೆ ನ್ಯಾಯ ದೊರಕಿಸಿ ಕೊಡಲು ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುವುದೇ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 16 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ ಚಾಲ್ತಿಯಲ್ಲಿರುತ್ತದೆ ಸದರಿ ವಿಭಾಗಕ್ಕೆ ಒಟ್ಟು ಮಂಜೂರಾಗಿರುವ 61 ಸಹಾಯಕ ಉಪನ್ಯಾಸಕರ ಹುದ್ದೆಗಳ ಪೈಕಿ 59 ಜನ ಸಹಾಯಕ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ

ಆ) ಹೌದು

ಇ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ

ಈ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ

499(454) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ಬೆಳ್ತಂಗಡಿಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾದ ಬೋಧಕ ಬೋಧಕೇತರ ಹುದ್ದೆಗಳೆಷ್ಟು

ಆ) ಅವುಗಳ ಪೈಕಿ ಖಾಲಿ ಹುದ್ದೆಗಳೆಷ್ಟು ಹಾಗೂ ಖಾಲಿ ಹುದ್ದೆಗಳನ್ನು ಇದುವರೆಗೂ ತುಂಬದಿರಲು ಕಾರಣಗಳೇನು,

ಇ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) ಬೋಧಕ 10 ಹುದ್ದೆಗಳು

ಬೋಧಕೇತರ 06 ಹುದ್ದೆಗಳು ಮಂಜೂರಾಗಿರುತ್ತವೆ

ಆ) ಬೋಧಕರ ಹುದ್ದ ಖಾಲಿ ಇರುವುದಿಲ್ಲ ಆದರೆ, ಗ್ರಂಥಪಾಲಕರ ಹಾಗೂ ದೈಹಿಕ ಶಿಕ್ಷಕರ ಹುದ್ದೆ ಖಾಲಿ ಇದೆ ಬೋಧಕೇತರರ ಪೈಕಿ,

ಗ್ರಂಥಾಲಯ ಸಹಾಯಕರ ಹುದ್ದೆ	–	01
ಪರಿಚಾರಕರ ಹುದ್ದೆ	–	01

ಖಾಲಿ ಇರುತ್ತವೆ

ಇ) ವರ್ಗಾವಣೆ ಸಂದರ್ಭದಲ್ಲಿ ಅಥವಾ ಅನ್ಯಕಾರ್ಯ ನಿಮಿತ್ತದ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು